**ಓ ಎಸ್ ನಂ:102/2015**
**ಪಿ.ಡಬ್ಲ್ಯೂ -1**
**ದಿನಾಂಕ:04.10.2023**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಹೆಚ್.ಎನ್.ಎಂ. ವಕೀಲರಿಂದ:**

ನಾನು 5ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಓದಲು ಮತ್ತು ಬರೆಯಲು ಬರುತ್ತದೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ವಾದ ಪತ್ರ ನೋಟೀಸು ಮತ್ತು ಕರಾರು ಪತ್ರದಲ್ಲಿ ಏನಿದೆ ಎಂದು ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ನನ್ನ ಊರು ಚಿಕ್ಕಮಂಗಳೂರು ಜಿಲ್ಲೆಯ, ಹಾರದಹಳ್ಳಿ ಗ್ರಾಮ ಎಂದರೆ ಸರಿ. ನನಗೆ ಹೊಸದುರ್ಗದಿಂದ ಹಾರನಹಳ್ಳಿ ಗ್ರಾಮಕ್ಕೆ ಸುಮಾರು 115 ಕಿ.ಮಿ. ಆಗುತ್ತದೆ. ದಾವಾ ಸ್ವತ್ತು ಇರುವ ಶೆಟ್ಟಿ ಹಳ್ಳಿ ಗ್ರಾಮ ಇಲ್ಲಿಂದ ಸುಮಾರು 8 ರಿಂದ 10 ಕಿ.ಮಿ. ಆಗುತ್ತದೆ. ಶೆಟ್ಟಿಹಳ್ಳಿ ಗ್ರಾಮಕ್ಕೆ ನನ್ನ ಹೆಂಡತಿಯ ಅಕ್ಕನಾದ ರೇಣುಕಮ್ಮನನ್ನು ರಮೇಶಪ್ಪನಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಸಂಬಂಧದಿಂದಾಗಿ ನಾನು ಮತ್ತು ನನ್ನ ಮಗಳು ಆಶಾ ಶೆಟ್ಟಿ ಹಳ್ಳಿ ಗ್ರಾಮಕ್ಕೆ ಆಗಿಂದಾಗೆ ಬರುತ್ತಿದ್ದೇವೆ ಎಂದರೆ ಸಾಕ್ಷಿಯು ನನ್ನ ಮಗಳು ಯಾವಾಗಲಾದರೊಮ್ಮೆ ಬರುತ್ತಿದ್ದಳು, ನಾನುಯಾವಾಗಲು ಹೋಗುತ್ತಿದ್ದೆ ಎಂದು ನುಡಿದಿರುತ್ತಾರೆ.

2. ನನ್ನ ಮಗಳು ಆಶಾ ನನ್ನು 2ನೇ ಪ್ರತಿವಾದಿಗೆ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ನನ್ನ ಮಗಳು ಎರಡನೇ ಪ್ರತಿವಾದಿಯೊಂದಿಗೆ ಒಟ್ಟಾಗಿ ಜೀವನ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯ ಒಟ್ಟಾಗಿ ಜೀವನ ಮಾಡುತ್ತಿದ್ದಾರೆ ಆದರೆ ಸಂತೋಷದಿಂದ ಜೀವನ ಮಾಡುತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ 2ನೇ ಪ್ರತಿವಾದಿ ಯಾವುದೇ ವಕೀಲರನ್ನು ನೇಮಿಸಿರುವುದಿಲ್ಲ ಎಂದರೆ ಸರಿ. ಎರಡನೇ ಪ್ರತಿವಾದಿಯು ನಮ್ಮ ಮೇಲಿರುವ ಪ್ರೀತಿಯಿಂದ ಯಾವುದೇ ವಕೀಲರನ್ನುನೇಮಿಸಿಲ್ಲ ಎಂದರೆ ಸಾಕ್ಷಿಯು

ಸರಿಯಲ್ಲ ಎಂದು ನುಡಿದಿರುತ್ತಾರೆ, ಮುಂದುವರೆದು 2 ನೇ ಪ್ರತಿವಾದಿಯು ನಮ್ಮ ಮೇಲೆ ಯಾವಾಗಲೂ ಗಲಾಟೆ ಮಾಡುತ್ತಿರುತ್ತಾರೆ ಎಂದು ನುಡಿದಿರುತ್ತಾರೆ. ಈಗ ನನ್ನ ಮಗಳು ಮತ್ತು 2 ನೇ ಪ್ರತಿವಾದಿ ಶೆಟ್ಟಿಹಳ್ಳಿ ಯಲ್ಲೆ ಜೀವನ ಮಾಡುತ್ತಿದ್ದಾರೆ.

3. 2 ನೇ ಪ್ರತಿವಾದಿ ಹಾಗೂ ನನ್ನ ಮಗಳಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ ಎಂದರೆ ಸರಿ. ನನ್ನ ಮಗಳ ಮಗಳಾದ ಲೇಖನ ನನ್ನು ನನ್ನ ಮಗ ಹರೀಶ ನಿಗೆ ವಿವಾಹ ಮಾಡಿಸಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಒಂದು ಖರೀದಿ ಮಾಡಿರುವ ಆಸ್ತಿಯಾಗಿರುತ್ತದೆ ಇನ್ನೊಂದು ದರಕಾಸ್ತಿನಿಂದ ಬಂದಿರುತ್ತದೆ. ಇನ್ನೊಂದು ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಕರಾರು ಪತ್ರ ಮಾಡಿಕೊಳ್ಳುವಾಗ ನಾನು ಯಾವುದೇ ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ. ದರಕಾಸು ಮತ್ತು ಕ್ರಯ ಎಂದು ಹೇಳಲಾಗುವಂತಹ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನಾನು ಸದರಿ ದಾವಾ ಸ್ವತ್ತನ್ನು ಖರೀದಿಸುವ ಪೂರ್ದದಲ್ಲಿ ಯಾವುದೇ ವಕೀಲರ ಸಲಹೆಯನ್ನು ಪಡೆದುಕೊಂಡಿರುವುದಿಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತಾಗಿದ್ದು ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದರೆ ಸತ್ಯಾಂಶ ಹೊರ ಬೀಳುತ್ತದೆ ಎಂಬ ಕಾರಣದಿಂದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನ್ಯಾಯಾಲಯದಲ್ಲಿ ಕುಳಿತಿರುವ ಪುಷ್ಪ ಇವರು 1 ನೇ ಪ್ರತಿವಾದಿಯ ಮಗಳು ಎಂದರೆ ಸರಿ.

4.ದಾವಾ ಸ್ವತ್ತಿಗೆ ಸಂಬಂಧಿಸಿದ ಕ್ರಯದ ಕರಾರು ಪತ್ರಕ್ಕೆ ಪುಷ್ಪ ರವರ ಸಹಿಯನ್ನು ನಾನು ಪಡೆದುಕೊಂಡಿರುವುದಿಲ್ಲ. ಅವರ ಸಹಿಯನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಆದರೆ ಅವರು ಆ

ಸಮಯದಲ್ಲಿ ಊರಿನಲ್ಲಿ ಇರುವುದಿಲ್ಲ. ಇದೇ ನ್ಯಾಯಾಲಯದಲ್ಲಿ ಪುಷ್ಪ ರವರು ಓ ಎಸ್ 246/2015 ರ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದು ಈಗಲೂ ವಿಚಾರಣಾ ಹಂತದಲ್ಲಿ ಇದೆ.

5.ಸದರಿ ಕ್ರಯ ಪತ್ರವನ್ನು ಹೊಸದುರ್ಗದ ಹೆಚ್.ಗೋಪಾಲಕೃಷ್ಣ ರವರ ಆಫೀಸಿನಲ್ಲಿ ಮಾಡಿಕೊಂಡಿರುತ್ತೇವೆ. ಹೆಚ್. ಗೋಪಾಲಕೃಷ್ಣ ರವರು ನನ್ನ ವಕೀಲರ ಜೂನಿಯರ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರುಪತ್ರದ ಚಾಪಾ ಕಾಗದವನ್ನು ಶಿವಮೂರ್ತಪ್ಪ ತಂದಿರುತ್ತಾರೆ. ಯಾರ ಹೆಸರಿಗೆ ಬೇಕಾದರೂ ಯಾರಾದರೂ ಚಾಪಾ ಕಾಗದವನ್ನು ಪಡೆಯಬಹುದು ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿದಿರುತ್ತಾರೆ. ಚಾಪಾ ಕಾಗದವನ್ನು ಚಾಪಾ ಕಾಗದವನ್ನು ಮಾರುವವರಿಂದ ತಂದಿರುತ್ತಾರೆ. ಎಲ್ಲಿ ಎಂದು ನನಗೆ ಗೊತ್ತಿಲ್ಲ. ಕರಾರು ಪತ್ರವನ್ನು ಬರೆದ ದಿನಾಂಕದಂದೇ ಚಾಪಾ ಕಾಗದವನ್ನು ಖರೀದಿ ಮಾಡಿರುತ್ತಾರೆ.

6. ಚಾಪಾ ಕಾಗದವನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿರುವ ದಿನಾಂಕವನ್ನು ಕೇಳಿದಾಗ ಸಾಕ್ಷಿಯು ತನಗೆ ಸರಿಯಾಗಿ ಕಾಣುತ್ತಿಲ್ಲಎಂದು ಹೇಳುತ್ತಾರೆ. ನ್ಯಾಯಾಲಯವು ಸದರಿ ಜಮೀನಿನ ಮಾರಾಟದ ಒಪ್ಪಂದದ ಕರಾರು ಪತ್ರವನ್ನು ನೋಡಿದಾಗ ದಿನಾಂಕ 07-ಪೆಬ್ರವರಿ-2006 ಎಂದು ಇರುತ್ತದೆ. ಚಾಪಾ ಕಾಗದವನ್ನು ಬರೆದ ದಿನಾಂಕ 08.02.2006 ಇರಬಹುದು. ಸಾಕ್ಷಿಗೆ ಚಾಪಾ ಕಾಗದವನ್ನು ತೋರಿಸಿ ಸದರಿ ಚಾಪಾ ಕಾಗದದಲ್ಲಿ ದಿನಾಂಕವು 06.02.2008 ಎಂದು ಇದೆ ಎಂದು ತಿಳಿಸಿದಾಗ ಸಾಕ್ಷಿಯು ಸುಳ್ಳು ಎಂದು ಹೇಳಿರುತ್ತಾರೆ. ದಿಃ 06.02.2008 ರಂದು ನಾವು ಕ್ರಯ ಪತ್ರವನ್ನು ಬರೆಸಿಲ್ಲ ಎಂದರೆ ಸಾಕ್ಷಿಯು ನನಗೆ ಯಾವುದು ಸರಿಯಾಗಿ ನೆನಪಾಗುತ್ತಿಲ್ಲ ಎಂದು ಹೇಳಿರುತ್ತಾರೆ.

7.ನನಗೆ 1 ನೇ ಪ್ರತಿವಾದಿಯು ಎಂದು ಯಾವಾಗಲೂ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ

ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರದಲ್ಲಿರುವಂತಹ 1 ನೇ ಪ್ರತಿವಾದಿಯ ಸಹಿಯು ಆತನ ಸಹಿಯೇ ಅಲ್ಲ ಎಂದರೆ ಸರಿಯಲ್ಲ.

8.ನನ್ನ ಮಗಳನ್ನು 1 ನೇ ಪ್ರತಿವಾದಿಯ ಮಗನಿಗೆ ಕೊಟ್ಟ ಮೇಲೆ ಶಿವಮೂರ್ತಪ್ಪನ ಮನೆಗೆ ಬಂದು ಹೋಗಿ ಮಾಡುತ್ತಿದ್ದೆವು ಎಂದರೆ ಸರಿ. ನನ್ನ ಮಗಳ ಮದುವೆಯ ಮುಂಚೆಯೇ ಪುಷ್ಪ ರವರ ಮದುವೆಯಾಗಿರಲಿಲ್ಲ ಎಂದರೆ ಸಾಕ್ಷಿಯು ನನ್ನ ಮಗಳ ಮದುವೆಯ ಮುಂಚೆಯೇ ಪುಷ್ಪ ರವರ ಮದುವೆ ಆಗಿತ್ತು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ಶಿವಮೂರ್ತಪ್ಪನವರು ಆರ್ಥಿಕ ವಾಗಿ ಚೆನ್ನಾಗಿದ್ದಾರೆ ಎಂದರೆ ಸರಿ. ಅವರಿಗೆ ಎರಡು ಮಕ್ಕಳಿದ್ದು ಆಸ್ತಿ ಮಾರಾಟ ಮಾಡುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ಶಿವಮೂರ್ತಪ್ಪ ನವರು ಖಾಲಿ ಚಾಪಾ ಕಾಗದವನ್ನು ತಮ್ಮ ಆಸ್ತಿಯನ್ನು ಪಾಲು ಮಾಡಲು ತಮ್ಮ ಮನೆಯಲ್ಲಿ ತಂದು ಇಟ್ಟಿದ್ದು ನಾನು ಅವರ ಮನೆಗೆ ಹೋಗುವಾಗ ಸದರಿ ಚಾಪಾ ಕಾಗದವನ್ನು ತೆಗೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

9.ನಾನು ನನ್ನ ಮಗಳು ನನ್ನ ಅಳಿಯ ಸೇರಿಕೊಂಡು ಚಾಪಾ ಕಾಗದ ತಂದು ಎರಡು ವರ್ಷದ ಬಳಿಕ ನಿಪಿ.1 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಪುಷ್ಪ ರವರಿಗೆ ಆಸ್ತಿ ಸಿಗಬಾರದು ಎಂದು ಎಲ್ಲಾ ಆಸ್ತಿಯು ನನ್ನ ಮಗಳಿಗೆ ಸೇರಬೇಕು ಎಂಬ ದುರುದ್ದೇಶದಿಂದ ನಿಪಿ.1 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಳಿಯ ಆರೋಗ್ಯವಾಗಿ ಇದ್ದಾರೆ ಎಂದರೆ ಸರಿ. ಆದರೆ ಅವರು ಅಂಗವಿಕಲರಾಗಿರುತ್ತಾರೆ. ಕಾಲು ಸರಿ ಇರುವುದಿಲ್ಲ, ಕುಂಟುಕೊಂಡು ನಡೆಯುತ್ತಾರೆ. ನನ್ನ ಅಳಿಯ ನ್ಯಾಯಾಲಯಕ್ಕೆ ಹಾಜರಾಗದೇ ಇರಲು ನಾನೇ ಕಾರಣ ಎಂದರೆ ಸರಿಯಲ್ಲ. ನನ್ನ ಮಗಳ ಮದುವೆಯಾಗಿ ಅಂದಾಜು 21 ವರ್ಷ ಆಗಿರಬಹುದು. ಪುಷ್ಪ ರವರ ಮದುವೆ ನನ್ನ ಮಗಳ ಮದುವೆಗಿಂತ 20 ದಿನ ಮುಂಚೆ ಯಾಗಿರುತ್ತದೆ. ಈಗ ನನ್ನ ಪ್ರತಿವಾದಿ

1 ರವರ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ.

10.ನಾನು ಈ ದಾವೆಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಗೆ ವಕೀಲರ ಮುಖಾಂತರ ನೋಟೀಸನ್ನು ನೀಡಿರುತ್ತೇನೆ, ಆದರೆ ದಿನಾಂಕ ನೆನಪಿಲ್ಲ. ಸಾಕ್ಷಿಗೆ ನಿಪಿ.5 ನ್ನು ತೋರಿಸಲಾಗಿ, ಅದರಲ್ಲಿನೋಟೀಸ್ ನೀಡಿದ ದಿನಾಂಕವನ್ನು ಕೇಳಿದಾಗ ಸಾಕ್ಷಿಯು ದಿನಾಂಕ ಕಾಣಿಸುತ್ತಿಲ್ಲ ಎಂದು ನುಡಿದಿರುತ್ತಾರೆ. ನೋಟೀಸ್ ನಲ್ಲಿ ದಿನಾಂಕವೇ ನಮೂದಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನೋಟೀಸ್ ನ್ನು ತೋರಿಸಲಾಗಿ ಕರಾರನ್ನು ಮಾಡಿಕೊಂಡ ದಿನಾಂಕ ನಮೂದಾಗಿಲ್ಲ ಎಂದರೆ ಸಾಕ್ಷಿಯು ನನಗ ಅಷ್ಟಾಗಿ ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ.5 ದಾವೆಗಾಗಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

11.ನಿಪಿ.1 ಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಹಣವನ್ನು ನೀಡಿಲ್ಲ ಮತ್ತು ಪ್ರತಿವಾದಿಗಳು ಯಾವುದೇ ಹಣವನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಪುಷ್ಪ ರವರು ಈಗ ಶೆಟ್ಟಿಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸರ್ವೆ ನಂ.34/14 ರಲ್ಲಿ ಈಗ ಪುಷ್ಪ ರವರು ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನ ಸ್ವತ್ತು ದಾವಾ ಅನುಸೂಚಿ 3 ಆಗಿರುತ್ತದೆ ಎಂದರೆ ಸರಿಯಲ್ಲ.

12.ನಾನು ಕರೆದಾಗ ಬಂದು ಕ್ರಯ ಪತ್ರ ಮಾಡಿಕೊಡಿ ಎಂದು 1 ನೇ ಪ್ರತಿವಾದಿಗೆ ಹೇಳಿದ್ದೆ. ಆದರೆ ಕ್ರಯದ ಕರಾರು ಪತ್ರದಲ್ಲಿ ಆ ರೀತಿಯಾಗಿ ಬರೆಸಿರುವುದಿಲ್ಲ. ಕ್ರಯದ ಕರಾರು ಪತ್ರವನ್ನು ಮಾಡಿಕೊಡುವಾಗ ಇಷ್ಟೆ ದಿನದಲ್ಲಿ ಮಾಡಿಕೊಡ ಬೇಕು ಎಂದು ಯಾವುದೇ ಶರತ್ತು ಇರಲಿಲ್ಲ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರದ ನಂತರ ನಾವು ಪ್ರತಿವಾದಿಗಳಿಗೆ ಏನನ್ನು ಕೇಳದೆ ನೇರವಾಗಿ ನ್ಯಾಯಾಲಯಕ್ಕೆ ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು ಕ್ರಯದ ಕರಾರು ಪತ್ರವನ್ನು ಮಾಡಿಕೊಡಲು ಪ್ರತಿವಾದಿಗಳಿಗೆ ಯಾವ ದಿನಾಂದದಂದು ಕೇಳಿದೆ ಎಂದು ಹೇಳಲು ಸಾದ್ಯವಿಲ್ಲ. ನಾನು ಹಾಕಿದ ದಾವೆ

**ಓ ಎಸ್ ನಂ:102/2015**
**ಪಿ.ಡಬ್ಲ್ಯೂ -1**
**ದಿನಾಂಕ:04.10.2023**

ಮತ್ತು ನಿಪಿ-1 ಕಾಲ ಪರಿಮಿತಿ ಮೀರಿರುತ್ತದೆ ಎಂದರೆ ಸರಿಯಲ್ಲ. ನಮಗೆ ಯಾವುದೇ ಕ್ರಯದ ಕಾರಾರು ಪತ್ರವನ್ನು ಪ್ರತಿವಾದಿಗಳು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಕ್ರಯವನ್ನು ಮಾಡಿಕೊಳ್ಳುವ ಪ್ರಮೇಯವೇ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಶಿವಮೂರ್ತಪ್ಪ ನ ಸಹಿ ಸೃಷ್ಟಿ ಸಿದ ಸಹಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮಗಳು ನನ್ನ ಅಳಿಯ ಮತ್ತು ಮೊಮ್ಮಗಳು ಸೇರಿ 1 ನೇ ಪ್ರತಿವಾದಿಯಿಂದ ಪುಷ್ಪನಿಗೆ ಯಾವುದೆ ಆಸ್ತಿ ಹೋಗಬಾರದು ಎಂದು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.